ಶ್ರೀ ಗೋಪಾಲ್ ನಾಯ್ಕ್ .ಬಿ ಮುಖ್ಯ ಅಭಿಯಂತರರು, ದಾಸರಹಳ್ಳಿ ವಲಯ, ಬಿಬಿಎಂಪಿ ಇವರು ದಿನಾಂಕ ರಂದು ನಡೆಸಲಾದ ಕಾಮಗಾರಿಯ ಪರಿವೀಕ್ಷಣಾ ಟಿಪ್ಪಣಿ.

ಹಾಜರಿದ್ದ ಅಧಿಕಾರಿಗಳು:

1. ಶ್ರೀ ರಂಗನಾಥ್ ಬಿ.ಆರ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ಉಪವಿಭಾಗ
2. ಶ್ರೀ ವೆಂಕಟೇಶ್ಪ, ,ರವರು ಸಹಾಯಕ ಅಭಿಯಂತರರು, ವಾರ್ಡ್ ನಂ.15, ದಾಸರಹಳ್ಳಿ

ದಾಸರಹಳ್ಳಿ ಉಪವಿಭಾಗ ವ್ಯಾಪ್ತಿಯ ವಾರ್ಡ್ ನಂ.15ಕ್ಕೆ ಸಂಬಂಧಿಸಿದಂತೆ ಪ್ರಗತಿಯಲ್ಲಿರುವ ಕೆಳಕಂಡ ಕಾಮಗಾರಿಯನ್ನು ಪರಿವೀಕ್ಷಿಸಲಾಯಿತು.

ಕಾಮಗಾರಿ ಹೆಸರು: Improvements and Re-Asphalting to Ganesha Saw Mill road and surrounding roads in Dasarahalli in Ward No.15
A.S No.:- EE/DD/AS/95/2020-21 Dt.04.07.2020

T.S No :- SE/DZ/TS/59/2020-21 Dated.17.07.2020

W.O. No:- EE/DD/WO/03/2022-23 Dated.20/04/2022

*****

ಸದರಿಕಾಮಗಾರಿಯನ್ನುಕೆ.ಆರ್.ಐ.ಡಿ.ಎಲ್ ಮುಖಾಂತರ ನಿರ್ವಹಿಸಲು ಉದ್ದೇಶಿಸಿ ಕರಾರು ಸಂಖ್ಯೆ: EE/DD/WO/03/2022-23 Dated.20/04/2022 ರನ್ವಯ ರೂ.40.00 ಲಕ್ಷಗಳಿಗೆ ಮೆ॥ಕೆ.ಆರ್.ಐ.ಡಿ.ಎಲ್‌ರವರಿಗೆಕಾರ್ಯಾದೇಶ ನೀಡಲಾಗಿರುತ್ತದೆ.

ಸದರಿ ಕಾಮಗಾರಿಯು ಪ್ರಗತಿಯಲ್ಲಿದ್ದು, ಹಾಜರಿದ್ದ ಸಹಾಯಕ ಅಭಿಯಂತರರವರು ಪ್ರಗತಿ ವಿವರಗಳನ್ನು ತಿಳಿಸಿರುತ್ತಾರೆ. ಸಹಾಯಕ ಅಭಿಯಂತರರು ಪರಿವೀಕ್ಷಣಾ ಸಮಯದಲ್ಲಿ ಕೆಳಕಂಡ ಅಂಶಗಳನ್ನು ವರದಿಸಿರುತ್ತಾರೆ.

- ಸದರಿ ಕಾಮಗಾರಿಗೆ ಮಂಜೂರಾಗಿರುವ ಅಂದಾಜು ಪಟ್ಟಿಯಲ್ಲಿ ದಾಸರಹಳ್ಳಿ ಗಣೇಶ ಸಾಮಿಲ್ ರಸ್ತೆಗೆ ಡಾಂಬರು ಹಾಕಲು ಹಾಗೂ ಸದರಿ ರಸ್ತೆಗೆ ಹೊಂದಿಕೊಂಡಿರುವ ಅಡ್ಡರಸ್ತೆಗಳಲ್ಲಿ ಫ್ಲಾಗಿಂಗ್ ಕೋರ್ಸ್ ನಿಂದ ಚರಂಡಿಯನ್ನು ಎತ್ತರಿಸಿ, ಹೂಳು ತೆಗೆದು ಕವರಿಂಗ್ ಸ್ಲ್ಯಾಬ್ ಅಳವಡಿಸಲು ಅನುವು ಮಾಡಿಕೊಳ್ಳಲಾಗಿತ್ತು.
- ಆದರೆ ಮಾನ್ಯ ಶಾಸಕರು, ದಾಸರಹಳ್ಳಿ ವಿಧಾನಸಭಾ ಕ್ಷೇತ್ರರವರು ಸಾರ್ವಜನಿಕರ ಕೋರಿಕೆಯ ಮೇರೆಗೆ ವಾರ್ಡ್ ನಂ.15ರ ವ್ಯಾಪ್ತಿಯ ಗಣೇಶ ಸಾಮಿಲ್ ರಸ್ತೆ ಹಾಗೂ ಸದರಿ ರಸ್ತೆಗೆ ಹೊಂದಿಕೊಂಡಿರುವ 2ನೇ ಅಡ್ಡರಸ್ತೆ, 3ನೇ ಅಡ್ಡರಸ್ತೆಗಳು ತೀವ್ರವಾಗಿ ಹದಗೆಟ್ಟಿದ್ದು ಸಾರ್ವಜನಿಕರಿಗೆ ತೊಂದರೆಯಾಗುವುದರಿಂದ ಸದರಿ ರಸ್ತೆಗಳನ್ನು ಅತೀ ತುರ್ತಾಗಿ ಅಭಿವೃದ್ಧಿಪಡಿಸಬೇಕೆಂದು ಸ್ಥಳ ಪರಿವೀಕ್ಷಣೆ ವೇಳೆ ತಿಳಿಸಿರುತ್ತಾರೆ. ಕೋವಿಡ್-19 ಕಾರಣದಿಂದ 2020-21ನೇ ಸಾಲಿನಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನ ಲಭ್ಯವಾಗದ ಕಾರಣ ಪ್ರಸ್ತಾಪಿತ ಕಾಮಗಾರಿಯಲ್ಲಿ ಚರಂಡಿಗಳನ್ನು ಫ್ಲಾಗಿಂಗ್ ಕೋರ್ಸ್ ಎತ್ತರಿಸುವ ಬದಲಿಗೆ, ಸಾರ್ವಜನಿಕರ ಹಿತದೃಷ್ಟಿಯಿಂದ ವಾರ್ಡ್ ನಂ.15ರ ವ್ಯಾಪ್ತಿಯ ಗಣೇಶ ಸಾಮಿಲ್ ರಸ್ತೆ ಹಾಗೂ ಸದರಿ ರಸ್ತೆಗೆ ಹೊಂದಿಕೊಂಡಿರುವ 2ನೇ ಅಡ್ಡರಸ್ತೆ, 3ನೇ ಅಡ್ಡರಸ್ತೆಗಳಲ್ಲಿ ಡಾಂಬರೀಕರಣವನ್ನು ನಡೆಸಲು ತಿಳಿಸಿರುತ್ತಾರೆ.
- ಸದರಿಯವರ ಕೋರಿಕೆಯಂತೆ ಸ್ಥಳ ಪರಿಶೀಲನೆ ನಡೆಸಿ, ವಾರ್ಡ್ ನಂ.15ರ ವ್ಯಾಪ್ತಿಯ ಗಣೇಶ ಸಾಮಿಲ್ ರಸ್ತೆ ಹಾಗೂ ಸದರಿ ರಸ್ತೆಗೆ ಹೊಂದಿಕೊಂಡಿರುವ 2ನೇ ಅಡ್ಡರಸ್ತೆ, 3ನೇ ಅಡ್ಡರಸ್ತೆಗಳನ್ನು ಅಭಿವೃದ್ಧಿಪಡಿಸಲು ಅನುದಾನದ ಕೊರತೆಯಿಂದಾಗಿ ಇದುವರೆಗೂ ಸಾಧ್ಯವಾಗಿರುವುದಿಲ್ಲ. ಅಲ್ಲದೇ ಸದರಿ ಕಾರ್ಯವನ್ನು ನಿರ್ವಹಿಸಲು ಬೇರೆ ಅನುದಾನ ಪ್ರಸಕ್ತ ಸಾಲಿನಲ್ಲಿ ಲಭ್ಯವಿಲ್ಲದ್ದರಿಂದ ಹಾಗೂ ತುರ್ತಾಗಿ ಪ್ರಸ್ತಾಪಿತ

Scanned with CamScanner

ರಸ್ತೆಗಳಲ್ಲಿ ರಸ್ತೆ ಕಾಮಗಾರಿಯನ್ನು ನಿರ್ಮಿಸುವುದು ಅತ್ಯಾವಶ್ಯಕವಾಗಿಯೂ ಇರುವುದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ದಾಸರಹಳ್ಳಿ ವ್ಯಾಪ್ತಿಯ ಗಣೇಶ ಸಾಮಿಲ್ ರಸ್ತೆ Road ID: (W0057) 2ನೇ ಅಡ್ಡರಸ್ತೆ Road ID: (W0088) ಹಾಗೂ 3ನೇ ಅಡ್ಡರಸ್ತೆ Road ID: (W0082) ಈ ರಸ್ತೆಗಳಲ್ಲಿ ಸ್ಥಳಾವಶ್ಯಕತೆಗನುಗುಣವಾಗಿ ಚರಂಡಿಗಳಲ್ಲಿನ ಹೂಳನ್ನು ತೆರವುಗೊಳಿಸಿ, ಒಡೆದು ಹೋಗಿರುವ & ಇಲ್ಲದಿರುವ ಕಡೆಗಳಲ್ಲಿ ಕವರಿಂಗ್ ಸ್ಲ್ಯಾಬ್‌ಗಳನ್ನು ಅಳವಡಿಸಿ & ಪ್ರಸ್ತಾಪಿತ ರಸ್ತೆಗಳಲ್ಲಿ ಡಾಂಬರೀಕರಣವನ್ನು ಕೈಗೊಳ್ಳುವುದು ಸೂಕ್ತ ಮತ್ತು ಅತ್ಯಾವಶ್ಯಕವೂ ಎಂದು ತಿಳಿಸುತ್ತಾ

ಮೇಲ್ಕಂಡ ಹೆಚ್ಚುವರಿ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಪರಿಶೀಲಿಸಿ ಸೂಕ್ತ ನಿರ್ದೇಶನ ನೀಡುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರವರು ಹಾಗೂ ಸಹಾಯಕ ಅಭಿಯಂತರರುರವರು ಸ್ಥಳದಲ್ಲಿ ವಿನಂತಿಸಿದರು.

ಮೇಲ್ಕಂಡ ಕಾಮಗಾರಿಯ ಸ್ಥಳ ಪರಿಶೀಲನೆ ಮಾಡಿದ್ದು, ಮಾನ್ಯ ಶಾಸಕರ ಕೋರಿಕೆಯಂತೆ ವಾರ್ಡ್ ನಂ.15ರ ವ್ಯಾಪ್ತಿಯ ಗಣೇಶ ಸಾಮಿಲ್ ರಸ್ತೆ ಹಾಗೂ ಸದರಿ ರಸ್ತೆಗೆ ಹೊಂದಿಕೊಂಡಿರುವ 2ನೇ ಅಡ್ಡರಸ್ತೆ, 3ನೇ ಅಡ್ಡರಸ್ತೆ ಡಾಂಬರೀಕರಣ ಕೈಗೊಳ್ಳಲು ಅವಶ್ಯಕವಿರುವ ಅಂಶಗಳನ್ನು ಅಂದಾಜುಪಟ್ಟಿಯಲ್ಲಿ ಅಳವಡಿಸಿಕೊಂಡು ಸ್ಥಳ ಪರಿಸ್ಥಿತಿಗೆ ಅನುಗುಣವಾಗಿ ಕಾಮಗಾರಿಯನ್ನು ನಿರ್ವಹಿಸುವ ಮತ್ತು ತಾಂತ್ರಿಕವಾಗಿ ಮೇಲ್ಕಂಡ ಹೆಚ್ಚುವರಿ ಪರಿಮಾಣಗಳನ್ನು ನಿರ್ವಹಿಸುವ ಅಗತ್ಯತೆಯನ್ನು ಗಮನಿಸಲಾಯಿತು. ಗುತ್ತಿಗೆ ಕರಾರಿನ ರೀತ್ಯಾ ಪರಿಶೀಲಿಸಿ ಹೆಚ್ಚುವರಿ ಪರಿಮಾಣಗಳಿಗೆ ತಗಲುವ ವೆಚ್ಚವನ್ನು ಅನುಮೋದಿತ ಗುತ್ತಿಗೆ ಕರಾರಿನ ಮೊತ್ತದ ಮಿತಿಯೊಳಗೆ ನಿರ್ವಹಿಸಲು ಹಾಗೂ ಕಾಮಗಾರಿಯ ಸ್ಥಳ ಬದಲಾವಣೆಗೆ ಸಕ್ಷಮ ಪ್ರಾಧಿಕಾರದ ಅನುಮೋದನೆಗೆ ಸಲ್ಲಿಸುವಂತೆ ಸೂಚಿಸಲಾಯಿತು.

ಕಾಮಗಾರಿಯನ್ನು ಗುತ್ತಿಗೆ ಕರಾರಿನ ಪ್ರಕಾರ ಮತ್ತು ಗುಣಮಟ್ಟಕ್ಕೆ ಅನುಗುಣವಾಗಿ ನಿರ್ವಹಿಸಲು ಕ್ರಮ ಕೈಗೊಂಡು ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಲಾಯಿತು.

ಸಹಿ/-
(ಗೋಪಾಲ್ ನಾಯ್ಕ್.ಬಿ)
ಮುಖ್ಯ ಅಭಿಯಂತರರು,
ದಾಸರಹಳ್ಳಿ ವಲಯ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು ಕೆಳಕಂಡಂತೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

1. ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬಿಬಿಎಂಪಿ
2. ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ಉಪವಿಭಾಗ, ಬಿಬಿಎಂಪಿ
3. ಕಛೇರಿ ಕಡತಕ್ಕೆ.

ಮುಖ್ಯ ಅಭಿಯಂತರರು,
ದಾಸರಹಳ್ಳಿ ವಲಯ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
Chief Engineer
Dasarahalli Zone
B. B. M. P

Scanned with CamScanner